ವಿಷಯ :- ಬೆಂಗಳೂರು ನಗರ ಸಾರಿಗೆ ತಿಂಗಳ ಪಾಸ್ ನೀಡುವ ಪದ್ಧತಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 873 (1429)

ಶ್ರೀ ಕುಂಭಿ ಸುಂದರ ರಾಜ್ (ಸುರತ್ಕಲ್) :- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೆ.ಎಸ್.ಆರ್.ಟಿ.ಸಿ.ಯವರು ಬೆಂಗಳೂರು ನಗರ ಸಾರಿಗೆ ಪ್ರಯಾಣಿಕರಿಗೆ ಬೆಂಗಳೂರು ನಗರ ಸಾರಿಗೆಯಲ್ಲಿ ತಿಂಗಳ ಪಾಸು ನೀಡುವ ಪದ್ಧತಿಯನ್ನು ಯಾವಾಗಿನಿಂದ ಪ್ರಾರಂಭಿಸಲಾಯಿತು. ಇದರ ಪ್ರಯೋಜನವನ್ನು ಪಡೆದುಕೊಂಡ ಪ್ರಯಾಣಿಕರ ಸಂಖ್ಯೆ ಎಷ್ಟು ; ತಿಂಗಳ ಪಾಸು ಸೌಲಭ್ಯವು ಅಯಶ್ವಸಿಯಾಗಲು ಕಾರಣಗಳೇನು ; ಪಾಸು ನೀಡಿಕೆಯಲ್ಲಿರುವ ಲೋಪದೋಷಗಳನ್ನು ಸರಿಪಡಿಸುವ ಬಗ್ಗೆ ಸಂಸ್ಥೆ ಯೋಚಿಸಿದೆಯೇ ;

ಆ) ಈಗ ತಿಂಗಳ ಪಾಸು ಪಡೆಯುವಲ್ಲಿನ ಲೋಪದೋಷಗಳನ್ನು ನಿವಾರಿಸುವ ದೃಷ್ಟಿಯಿಂದ ರೈಲ್ವೆ ಸೀಸನ್ ಟಿಕೇಟ್ ಮಾದರಿಯನ್ನು ಅನುಸರಿಸಲು ಇರುವ ತೊಂದರೆ ಗಳೇನು, ಆ ಮಾದರಿಯನ್ನು ಅನುಸರಿಸುವ ಬಗ್ಗೆ ಸೂಕ್ತ ಕ್ರಮವನ್ನು ಸಕಾಲದಲ್ಲಿ ಜರುಗಿಸುವರೇ ;

ಇ) ತಿಂಗಳ ಪಾಸಿಗೆ ನಿಗಧಿತವಾದ 150 ರೂ. ಗಳನ್ನು ಕಡಿಮೆ ಮಾಡಿ ರೆಡ್ ಬೋರ್ಡ್ ಬಸ್‌ಗಳಿಗೂ ಪ್ರಯಾಣ ಸೌಲಭ್ಯವನ್ನು ಒದಗಿಸುವ ಬಗ್ಗೆ ಸಾರ್ವಜನಿಕರ ಬೇಡಿಕೆಯಂತೆ ತಿಂಗಳ ಪಾಸ್‌ನಲ್ಲಿ ಇನ್ನೊಂದು ವರ್ಗವನ್ನು ಸೃಷ್ಟಿಸಿ ಅದರಲ್ಲಿ ಪುಷ್ಪಕ್ ಬಸ್‌ನಲ್ಲಿಯ ಪ್ರಯಾಣ ಸೌಲಭ್ಯವನ್ನು ಕಲ್ಪಿಸಲು ಮುಂದಾಗುವುದೇ?

ಈ) ಸದರಿ ತಿಂಗಳ ಪಾಸ್ ಸೌಲಭ್ಯ ಜನಪ್ರಿಯವಾಗಲು ಹಾಗೂ ಸಂಸ್ಥೆಗೆ ಲಾಭ ಬರಲು ಆದಾಯ ಸೋರುವಿಕೆ ತಡೆಗಟ್ಟಲು ಪ್ರಸ್ತುತ ಇರುವ ಲೋಪ ದೋಷಗಳನ್ನು ನಿವಾರಿಸಿ ಯೋಗ್ಯ ತಿಂಗಳ ಪಾಸು ಪದ್ಧತಿಯನ್ನು ಸಕಾಲದಲ್ಲಿ ತರಲಿಚ್ಚಿಸುವುರೇ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಸಾರಿಗೆ ಸಚಿವರು) :-

ಅ) ನಗರ ಸಾರಿಗೆಯಲ್ಲಿ ತಿಂಗಳ ಪಾಸು ನೀಡುವ ಪದ್ಧತಿಯನ್ನು 1-9-95 ರಿಂದ ಪ್ರಾರಂಭಿಸಲಾಯಿತು. ಇದರ ಪ್ರಯೋಜನವನ್ನು ಇದುವರೆವಿಗೂ 3810 ಪ್ರಯಾಣಿಕರು ಪಡೆದಿರುತ್ತಾರೆ. ಸದರಿ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗತ್ತಿದ್ದು, ಲೋಪ ದೋಷಗಳನ್ನು ಸರಿಪಡಿಸುವ ಪ್ರಶ್ನೆ ಉದ್ಭವವಾಗುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.